ಚಿತ್ರ: ಕಳ್ಳ ಕುಳ್ಳ (1975)
ಹಿನ್ನಲೆ ಗಾಯನ: ಎಸ್.ಪಿ. ಬಾಲಸುಬ್ರಹ್ಮಣ್ಯಂ ಮತ್ತು ಸಂಗಡಿಗರು
ಸಂಗೀತ: ರಾಜನ್-ನಾಗೇಂದ್ರ

ನಾ ಹಾಡಲು
ನೀವು ಹಾಡಬೇಕು
ತೂಗಾಡುತಾ ತಾಳ ಹಾಕಬೇಕು
ಎಲ್ಲರೂ ಒಂದಾಗುತ ನಕ್ಕು ನಲಿಯಬೇಕು
ಹಾಡುತಾ ಕುಣಿದಾಡುತಾ ಮೈಯ್ಯ ಮರೆಯಬೇಕು
ನಕ್ಕು ನಲಿಯಬೇಕು
ಮೈಯ್ಯ ಮರೆಯಬೇಕು ॥ 1 ॥

ಚೆಲ್ಲಾಟವಾಡೋ ವಯಸು
ಸಂಗಾತಿ ಬೇಕು
ಈ ಸ್ನೇಹದಿಂದ ನಮ್ಮ ಆಸೆ ತೀರಬೇಕು
ರಸಮಯ ನಿಮಿಷದ ಆನಂದ ಮೈ ತುಂಬಿದೆ
ಮರೆಯದ ಅನುಭವ
ನಮಗೇ ಕಾದಿದೇ ॥ ನಾ ಹಾಡಲೂ ॥ ॥ 2 ॥
ಸಂತೋಷದ ಈ ಸಮಯ ಸದಾ ಸವಿಯಬೇಕು
ಈ ಸಮಯ ಜಾರದಂತೆ ನೋಡಿ ನಡೆಯಬೇಕು
ಮುತ್ತಿನ ನಗುವಲಿ
ಎಂದೆಂದು ತೇಲಾಡುವಾ
ಚಿನ್ನದ ಹೃದಯವ
ಇಂದೇ ದೋಚುವಾ ॥ ನಾ ಹಾಡಲೂ ॥ ॥ 2 ॥